<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**ಸಿ.ಸಿ. ಸಂಖ್ಯೆಃ 106 /2023**

**ಸಾಕ್ಷಿಯನ್ನು ದಿಃ 15.07.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | |
|---|---|---|
| ಹೆಸರು | ಅಭಿಷೇಕ್ ಹೆಚ್.ಎನ್ | ಡಿ.ಡಬ್ಲ್ಯೂಃ 1 |
| ತಂದೆಯ ಹೆಸರು | ಲೇಟ್ ನಾರಾಯಣಗೌಡ | |
| ವಯಸ್ಸು | 32 ವರ್ಷ | |
| ಕೆಲಸ | ವ್ಯವಸಾಯ | |
| ವಾಸಸ್ಥಳ | ಹೊಸೂರುಕೊಡಗು ಕಾಲೋನಿ | |

## ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ MKS ವಕೀಲರಿಂದ

ನಾನು ಈ ಹಿಂದೆ Global Agri Biotech ಎಂಬ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಸದರಿ ಕಂಪನಿಯಿಂದ ಫಿರ್ಯಾದುದಾರರ ಅಂಗಡಿಯನ್ನು ನೋಡಿಕೊಳ್ಳಲು ನನಗೆ ಬಿಟ್ಟಿದ್ದರು. ಫಿರ್ಯಾದುದಾರರ ಅಂಗಡಿಯ ಹೆಸರು Arafa trading company ಆಗಿದೆ. ಕಂಪನಿಗೆ ಕೆಲಸಕ್ಕೆ ಸೇರುವ ಮೊದಲು ಭದ್ರತೆಗಾಗಿ ಚೆಕ್ಕನ್ನು ಕೊಡಬೇಕಾಗಿತ್ತು. ಅದೇ ರೀತಿ ನಾನು ಸಹಿ ಮಾಡಿದ ಖಾಲಿ ಚೆಕ್ಕನ್ನು ನೀಡಿದೆ. ನಂತರ ನಾನು ಮೇಲೆ ಹೇಳಿದ ಕಂಪನಿಯ ಕೆಲಸ ಬಿಟ್ಟೆ Arafa trading ಕಂಪನಿಯ ಮಾಲೀಕರ ಒತ್ತಡದಿಂದಾಗಿ ಕೆಲಸ ಬಿಟ್ಟೆ. ನಂತರ ನಾನು ಚೆಕ್ಕನ್ನು ಕೇಳಲೆಂದು ಹೋದೆ. ಆಗ ಫಿರ್ಯಾದುದಾರರು ಚೆಕ್ಕನ್ನು ಕೊಡುವುದಿಲ್ಲ, ಕೇಸು ಹಾಕುವುದಾಗಿ ಹೇಳಿದರು. ನನ್ನ ವಿರುದ್ಧ ಕೇಸನ್ನು ದಾಖಲಿಸಿದರು. ನಾನು ಫಿರ್ಯಾದುದಾರರಿಂದ ರೂ. 6ವರೆ ಲಕ್ಷ ಬೆಲೆಯ ಗೊಬ್ಬರ ಮತ್ತು ಬೀಜ ಖರೀದಿಸಿದ್ದೇನೆ ಎಂದು ಕೇಸು ಹಾಕಿದ್ದಾರೆ. ನನಗೆ ಯಾವುದೇ ರೀತಿಯ ನೋಟಿಸನ್ನು ಫಿರ್ಯಾದುದಾರರು ಕೊಟ್ಟಿಲ್ಲ. ಅವರು ನೋಟೀಸ್ ಕೊಟ್ಟಿದ್ದಲ್ಲಿ ನಾನು ಅದಕ್ಕೆ ಉತ್ತರವನ್ನು ನೀಡುತ್ತಿದ್ದೆ. ಫಿರ್ಯಾದುದಾರರು ನ್ಯಾಯಾಲಯಕ್ಕೆ GST bill ಅನ್ನು ಹಾಜರುಪಡಿಸಿದ್ದು ನನ್ನ ಹೆಸರಿನಲ್ಲಿ ಯಾವ GST ಇಲ್ಲ. ನನ್ನ ಪೂರ್ಣ ಹೆಸರು ಅಭಿಷೇಕ್ ಹೆಚ್.ಎನ್ ಆಗಿದ್ದರೂ ಸಹ ಬಿಲ್ಲಿನಲ್ಲಿ ಅಬಿ ಎಂದು ಮಾತ್ರ ನಮೂದಿಸಿದ್ದಾರೆ.ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಎಲ್ಲಾ ಬಿಲ್ಲುಗಳು ನಕಲಿ

ಬಿಲ್ಲುಗಳಾಗಿವೆ. ಸದರಿ ಬಿಲ್ಲುಗಳಲ್ಲಿ ನಾನು ಖರೀದಿಸಿದ ಬಾಬ್ತು ಸಹಿ ಇರಬೇಕಾಗಿತ್ತು ಆದರೆ ಸಹಿ ಇಲ್ಲ. ಫಿರ್ಯಾದುದಾರರು ಹಾಜರುಪಡಿಸಿರುವ ಎಲ್ಲಾ ದಾಖಲೆಗಳು ಸುಳ್ಳಾಗಿದೆ. ಫಿರ್ಯಾದುದಾರರು ಹಾಜರುಪಡಿಸಿದ phone pay ದಾಖಲೆಯಲ್ಲಿ ನನಗೆ ರೂ.1,65000 ಬರಬೇಕೆಂದು ನಮೂದಿಸಿದ್ದಾರೆ. ಈ ಹಿಂದೆ ಫಿರ್ಯಾದುದಾರರು ಸಾಕ್ಷಿ ನುಡಿಯುವಾಗ ನಾನು ಅವರ ಬಳಿ ಎರಡು ಸಾಲದ ಖಾತೆ ಹೊಂದಿದ್ದೇನೆ ಎಂದು ಹೇಳಿದ್ದಾರೆ. ನಾನು ಫಿರ್ಯಾದುದಾರರ ಬಳಿ ಸೀಲು ಸಹಿ ಹಾಕಿದ ದಾಖಲೆ ಇದ್ದರೆ ಕೊಡಿ ಎಂದು ಹೇಳಿದ್ದೆ. ಯಾವುದೇ ಸೀಲು ಮತ್ತು ಸಹಿ ಇಲ್ಲ ಎಂದು ಹೇಳಿದ್ದಾರೆ. ನನಗೆ ಸ್ಟಾಕ್ ಕೊಡಬೇಕಾದರೆ ಫಿರ್ಯಾದುದಾರರ ಬಳಿ e-way ಬಿಲ್ ಇರಬೇಕಾಗಿತ್ತು, ಆದರೆ ಅಂತಹ ಬಿಲ್ಲು ಅವರ ಬಳಿ ಇಲ್ಲ. ನನ್ನ ಬಳಿ GST ಇಲ್ಲದೇ ಇದ್ದರೂ ಸಹ ಅದನ್ನೇ ನಮೂದಿಸಿ ಬಿಲ್ಲು ಕೊಟ್ಟಿದ್ದಾರೆ.

**(ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಈಗಾಗಲೇ ಸಾಕಷ್ಟು ಕಾಲಾವಕಾಶ ನೀಡಿದ್ದು, ಅರ್ಜಿಯ ಮೇಲಿನ ಆದೇಶದಂತೆ ಆರೋಪಿ ಸಾಕ್ಷಿ ನುಡಿಯುತ್ತಿದ್ದು, ಆದ್ದರಿಂದ ಮುಂದುವರಿದ ಮುಖ್ಯ ವಿಚಾರಣೆಗೆ ಇಲ್ಲ ಎಂದು ತೆಗೆದುಕೊಳ್ಳಲಾಯಿತು. )**

**ಪಾಟೀ ಸವಾಲು: ಫಿರ್ಯಾದುದಾರರ ಪರ ಶ್ರೀ BSY ಪರ ಶ್ರೀ. RKR ವಕೀಲರಿಂದ:-**

ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.